## <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಓ.ಎಸ್. ನಂ.1/2025 ಪಿಡಬ್ಲ್ಯೂ: 01

**<u>ದಿನಾಂಕ: 28-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

(ಮುಖ್ಯ ವಿಚಾರಣೆ ಬದಲಾಗಿ ನಾನು ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಹೇಳಿಕೆಯು ಸತ್ಯವಾಗಿದ್ದು, ಅದನ್ನು ನೋಡುತ್ತಿದ್ದು ಅದರಲ್ಲಿರುವ ಸಹಿ ನನ್ನದು ಇರುತ್ತದೆ.)

**<u>ಮುಂದುವರೆದ ಮುಖ್ಯ ವಿಚಾರಣೆ: ಶ್ರೀ ಹೆಚ್.ಎಂ.ಎಸ್.ಎನ್. ವಕೀಲರಿಂದ ವಾದಿಯ ಪರವಾಗಿ:</u>**

ವೇಣುಕಲ್ಲುಗುಡ್ಡದ ಸರ್ವೆ ನಂ.**118** ರ ಪಹಣಿಯನ್ನು ನಿಪಿ–**1** ಎಂದು, ದಿನಾಂಕ **05–11–1996** ರ ನೋಂದಾಯಿತ ಟ್ರಸ್ಟ್ ಡೀಡನ್ನು ನಿಪಿ–**2** ಎಂದು, ಎಕ್ಸಿಕ್ಯೂಟೀವ್ ಇಂಜಿನಿಯರ್ ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ ಇವರ ದಿನಾಂಕ **30–03–1995** ರ ಪತ್ರವನ್ನು ನಿಪಿ–**3** ಎಂದು, ದಿನಾಂಕ **12–04–1996** ರ ಹಿರಿಯೂರು ತಾಲ್ಲೂಕು ಪಂಚಾಯಿತಿ ಕಾರ್ಯಾಲಯದ ಪತ್ರವನ್ನು ನಿಪಿ–**4** ಎಂದು, ದಿನಾಂಕ **10–07–1998** ರ ವಿಜಯ ಬ್ಯಾಂಕಿನ ಪತ್ರವನ್ನು ನಿಪಿ–**5** ಎಂದು, ಟ್ರಸ್ಟಿನ ಪತ್ರಗಳನ್ನು ನಿಪಿ–**6** ರಿಂದ **9** ಎಂದು, **1998** ಹಾಗೂ **1999** ನೇ ಸಾಲಿನ ಪ್ರಥಮ ಏಕಾದಶಿ ಹಬ್ಬದ ಆಹ್ವಾನ ಪತ್ರಿಕೆಗಳನ್ನು ನಿಪಿ–**10** ಹಾಗೂ **11** ಎಂದು, ಒಡವೆಗಳ ಎರಡು ಪುಟಗಳ ಜೆರಾಕ್ಸ್ ಪಟ್ಟಿಯನ್ನು ಶ್ರೀ ಡಿಸಿವಿ ವಕೀಲರ ಆಕ್ಷೇಪಣೆಗೊಳಪಟ್ಟು ನಿಪಿ–**12** ಎಂದು, ಟ್ರಸ್ಟ್ ಕಮಿಟಿಯವರ ಕೆಲಸದ ಹಾಗೂ ದೇವತಾ ಕಾರ್ಯಗಳನ್ನು ನಡೆಸಿರುವ ಪೋಟೋಗಳ ಪುಸ್ತಕವನ್ನು ಶ್ರೀ ಡಿಸಿವಿ ವಕೀಲರ ಆಕ್ಷೇಪಣೆಗೊಳಪಟ್ಟು ನಿಪಿ–**13** ಎಂದು, ದಿನಾಂಕ **23–10–2019** ರ ಲೀಗಲ್ ನೋಟೀಸನ್ನು ನಿಪಿ–**14** ಎಂದು, ಸದರಿ ನೋಟೀಸ್ ಗೆ ಸಂಬಂಧಿಸಿದ ಅಂಚೆ ರಶೀದಿಗಳನ್ನು ಮತ್ತು ಅಂಚೆ ಸ್ವೀಕೃತಿಗಳನ್ನು ನಿಪಿ–**14**(ಎ) ರಿಂದ **14**(ಕೆ) ಎಂದು, ದೇವರಾಜ್ ಬಿನ್ ಕಾವಲರ್ ಚಂದ್ರಪ್ಪ ಇವರಿಗೆ ಕಳುಹಿಸಿಕೊಟ್ಟಂತಹ ನೋಟೀಸಿನ ಎನ್ವಲಪ್ ನ್ನು ನಿಪಿ–**15** ಎಂದು, ಅದರಲ್ಲಿಯ ನೋಟೀಸಿನ ಪ್ರತಿಯನ್ನು ನಿಪಿ–**15**(ಎ) ಎಂದು, ದಿನಾಂಕ **24–11–2005** ರ ತಹಶೀಲ್ದಾರ್, ಹಿರಿಯೂರು ಇವರ ಜ್ಞಾಪನವನ್ನು ನಿಪಿ–**16** ಎಂದು, ಟ್ರಸ್ಟಿನ ಪತ್ರಗಳನ್ನು ನಿಪಿ–**17** ರಿಂದ **19** ಎಂದು, ಮಿಸ್ **310/2024** ರಲ್ಲಿಯ ಆದೇಶ ಪುಟದ ದೃಢೀಕೃತ ನಕಲನ್ನು ನಿಪಿ–**20** ಎಂದು, ಸದರಿ ಮಿಸ್ ಅರ್ಜಿಯಲ್ಲಿಯ ಈ ನ್ಯಾಯಾಲಯದ ಆದೇಶದ ದೃಢೀಕೃತ ಪ್ರತಿಯನ್ನು ನಿಪಿ–**21** ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಕೋರುತ್ತೇನೆ.

ಪಾಟೀ ಸವಾಲು: ಶ್ರೀ ಡಿಸಿವಿ ವಕೀಲರ ಕೋರಿಕೆಯ ಮೇರೇಗೆ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೆ.ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.